## ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 5** **ಪ್ರಥಮ ಭಾಷೆ : ಕನ್ನಡ** **ಮಾಹೆ : ಫೆಬ್ರವರಿ – 2022**

**ಗದ್ಯ ಭಾಗ : ಸಂಗೊಳ್ಳಿ ರಾಯಣ್ಣ**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಫೆಬ್ರವರಿ 1 ನೇ ವಾರ** | * ಕೊಟ್ಟ ವಿಷಯವನ್ನು ಓದಿ ಅರ್ಥೈಸಿಕೊಂಡು ಬರೆಯುವರು. | * ಶಿಕ್ಷಕರು ರಾಜರ ಆಳ್ವಿಕೆ ಕಾಲ, ಬ್ರಿಟೀಷರ ಆಳ್ವಿಕೆ ಕಾಲ, ಪ್ರಸ್ತುತ ಆಡಳಿತ ಕಾಲ ಈ ಮೂರು ವಿಷಯಗಳಿಗೆ ಸಂಬಂಧಿಸಿದಂತೆ ಚಿತ್ರಪಟ ಮತ್ತು ಕಿರು ವಿಷಯ ಸಂಗ್ರಹಿಸಿ ತರಗತಿ ಮಕ್ಕಳನ್ನು ಮೂರು ಗುಂಪಿನಲ್ಲಿ ಕೂರಿಸಿ ಪ್ರತಿ ಗುಂಪಿಗೂ ಒಂದೊಂದು ವಿಷಯ ಮತ್ತು ಚಿತ್ರಪಟ ಕೊಟ್ಟು ಬರೆಯಿಸುವುದು ಮತ್ತು ಪ್ರತಿ ಗುಂಪಿನಿಂದ ಒಂದು ಮಗು ಎಲ್ಲರಿಗೂ ಕೇಳುವಂತೆ ಓದಲು ಅನುಕೂಲಿಸುವುದು. | ವೀಕ್ಷಣೆ |
| | | * ಬರೆದ ವಿಷಯದ ಬಗ್ಗೆ ಮಾತಿನಲ್ಲಿ ಅಭಿವ್ಯಕ್ತಪಡಿಸುವುದು. | * ಮಕ್ಕಳು ಕೊಟ್ಟ ಈ ಕೆಳಗಿನ ಪಟ್ಟಿಯನ್ನು ಹೊಂದಿಸಿ ಬರೆದು ಇದರ ಬಗ್ಗೆ ತಮಗೆ ತಿಳಿದಷ್ಟು ಹೇಳಲು ಮಕ್ಕಳಿಗೆ ಶಿಕ್ಷಕರು ಪ್ರೋತ್ಸಾಹಿಸುವುದು.<br>ಸಂಗೊಳ್ಳಿ ರಾಯಣ್ಣ ಮದಕರಿ ನಾಯಕ<br>ಒನಕೆ ಓಬವ್ವ ಕೃಷ್ಣದೇವರಾಯ<br>ತೆನಾಲಿ ರಾಮಕೃಷ್ಣ ರಾಣಿ ಚೆನ್ನಮ್ಮ<br>ಬೀರಬಲ್ ಅಕ್ಬರ್ | ಅಭ್ಯಾಸ ಹಾಳೆ |
| | | * ಹೊಸಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯುವರು. | * ಆಯ್ದ ಪಾಠಭಾಗವನ್ನು ಹಾವ–ಭಾವದೊಂದಿಗೆ ಸ್ಪಷ್ಟವಾಗಿ ಓದಿ ವಿದ್ಯಾರ್ಥಿಗಳಿಂದ ಓದಿಸಿ ಹೊಸಪದಗಳನ್ನು ಸ್ವಂತವಾಕ್ಯದಲ್ಲಿ ಬಳಸಿ ಬರೆಯುವ ಚಟುವಟಿಕೆ ನೀಡುವುದು. | |

| | | | | |
|---|---|---|---|---|
| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
| | **ಫೆಬ್ರವರಿ 2 ನೇ ವಾರ** | * ಪ್ರಶ್ನೆಗಳಿಗೆ ಉತ್ತರ ಬರೆಯುವ ಸಾಮರ್ಥ್ಯ ಹೊಂದುವರು.<br><br>* ಸಮಾನಾರ್ಥಕ ಪದಗಳನ್ನು ಅರ್ಥೈಸಿಕೊಳ್ಳುವರು.<br><br>* ಸರಳ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಸೂಕ್ತ ಚಿಹ್ನೆಗಳನ್ನು ಬಳಸಿ ವಾಕ್ಯಗಳನ್ನು ಬರೆಯುವರು. | * ಶಿಕ್ಷಕರು ಪಾಠಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳಿ ಸರಿ ಉತ್ತರವನ್ನು ಪಠ್ಯದಲ್ಲಿ ಗುರ್ತಿಸಿ ಹೇಳಲು ಪ್ರೋತ್ಸಾಹಿಸುವುದು. ನಂತರ ಮಕ್ಕಳು ಗುಂಪಿನಲ್ಲಿ ಕುಳಿತು ಉತ್ತರ ಬರೆಯಲು ಅನುಕೂಲಿಸುವುದು.<br><br>* ಶಿಕ್ಷಕರು ವಿವಿಧ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಿಗೆ ಸಮಾನಾರ್ಥಕ ಪದಗಳನ್ನು ಮನದಟ್ಟು ಮಾಡಿಸುವುದು.<br><br>* ಶಿಕ್ಷಕರು ಮಕ್ಕಳಿಗೆ ಇಬ್ಬರು ವ್ಯಕ್ತಿಗಳ ನಡುವಿನ ಸಂಭಾಷಣೆಯನ್ನು ಪ್ಯಾರಾ ರೂಪದಲ್ಲಿ ಕೊಟ್ಟು ಸಂಭಾಷಣೆ ರೂಪದಲ್ಲಿ ಬರೆಯಲು ಮಾರ್ಗದರ್ಶನ ಮಾಡುವುದು. | ಅಭ್ಯಾಸ ಚಟುವಟಿಕೆ<br><br>ಗುಂಪು ಚಟುವಟಿಕೆ<br><br>ಸಂಭಾಷಣೆ |

## ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 5** **ಪ್ರಥಮ ಭಾಷೆ : ಕನ್ನಡ** **ಮಾಹೆ : ಫೆಬ್ರವರಿ – 2022**

**ಪದ್ಯ ಭಾಗ : ಮೂಡಲ ಮನೆ**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ಫೆಬ್ರವರಿ 3 ನೇ ವಾರ** | * ವಿದ್ಯಾರ್ಥಿಗಳು ತಮಗೆ ತಿಳಿದ ವಿಷಯದ ಬಗ್ಗೆ ನಿರರ್ಗಳವಾಗಿ ಮಾತನಾಡುವರು.<br><br>*ಆಡು ಭಾಷೆಯನ್ನು ಗ್ರಾಂಥಿಕ ಭಾಷೆಯಲ್ಲಿ ಬಳಸುವ ಸಾಮರ್ಥ್ಯ ಹೊಂದುವರು. | * ಶಿಕ್ಷಕರು ಕಪ್ಪುಹಲಗೆಯ ಮೇಲೆ ಭಾರತದ ನಕ್ಷೆ ಬಿಡಿಸಿ ಅದರೊಳಗೆ ಭಾಷೆ, ಜನಾಂಗ, ಏಕತೆ, ವಿವಿಧತೆ, ಸಂಸ್ಕೃತಿ, ಧರ್ಮ, ವಲಸೆ, ಒಳಗಿನವರು, ಹೊರಗಿನವರು ಇತ್ಯಾದಿ ವಿಷಯ ಬರೆದು ಪ್ರತಿ ವಿಷಯದ ಬಗ್ಗೆ ವಿದ್ಯಾರ್ಥಿಗಳು ತಮ್ಮ ಅನಿಸಿಕೆಯನ್ನು ಹಂಚಿಕೊಳ್ಳಲು ಅನುಕೂಲಿಸುವುದು.<br><br>* ಶಿಕ್ಷಕರು ಆಯ್ದ ಪದ್ಯ ಭಾಗವನ್ನು ರಾಗಬದ್ಧವಾಗಿ ಹಾಡಿ/ಧ್ವನಿಸುರಳಿ ಕೇಳಿಸಿ ಮಕ್ಕಳಿಂದ ಹಾಡಿಸುವುದು. ಗ್ರಾಂಥಿಕ ಭಾಷೆ ಮತ್ತು ಆಡುಭಾಷೆಯನ್ನು ಅರ್ಥೈಸಿಕೊಳ್ಳುವುದನ್ನು ವಿವಿಧ ಚಟುವಟಿಕೆಗಳ ಮೂಲಕ ಮಾಡಿಸಿ ಮಕ್ಕಳು ಗುಂಪಿನಲ್ಲಿ ಕುಳಿತು ಪದ್ಯದಲ್ಲಿನ ಆಡು ಭಾಷೆ ಪದಗಳ ಕೆಳಗೆ ಗೆರೆ ಎಳೆದು ಅವುಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಲು ಮಾರ್ಗದರ್ಶನ ನೀಡುವುದು.<br>*ಆಯ್ದ ಪದ್ಯ ಭಾಗವನ್ನು ಗ್ರಾಂಥಿಕ ರೂಪದಲ್ಲಿ ಬರೆದು ಪ್ರತೀ ಗುಂಪಿನಿಂದ ಒಬ್ಬ ವಿದ್ಯಾರ್ಥಿ ಬಂದು ತರಗತಿಯ ಎಲ್ಲಾ ಮಕ್ಕಳಿಗೂ ಕೇಳಿಸುವಂತೆ ಓದಲು ಅನುಕೂಲಿಸುವುದು. | ಚರ್ಚೆ<br><br>ಪದ್ಯ ಗಾಯನ<br><br>ಅಭ್ಯಾಸ ಹಾಳೆಗಳು |

| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ಫೆಬ್ರವರಿ 4 ನೇ ವಾರ** | * ಪ್ರಶ್ನೆಗಳಿಗೆ ಉತ್ತರ ಬರೆಯುವ ಸಾಮರ್ಥ್ಯ ಹೊಂದುವರು.<br><br>* ತಿಳಿದ ವಿಷಯದ ಬಗ್ಗೆ ನಿರರ್ಗಳವಾಗಿ ಮಾತನಾಡುವರು.<br><br>* ಕಾಲಗಳನ್ನು ಗುರುತಿಸುವ ಕ್ರಮವನ್ನು ಅರಿಯುವರು.<br><br>* ಲಿಂಗಗಳನ್ನು ಬದಲಾಯಿಸಿ ಬರೆಯುವರು. | * ಮಕ್ಕಳು ಗುಂಪಿನಲ್ಲಿ ಕುಳಿತು ಪ್ರಶ್ನೆಗಳಿಗೆ ಉತ್ತರ ಹುಡುಕಿ ಬರೆಯಲು ಮಾರ್ಗದರ್ಶನ ನೀಡುವುದು.<br><br>* ಭಾರತ ದೇಶವನ್ನು ಆಲದ ಮರಕ್ಕೆ ಹೋಲಿಸಿ ಮಾತನಾಡಲು ಮಕ್ಕಳಿಗೆ ಪ್ರೋತ್ಸಾಹಿಸುವುದು.<br><br>* ನಡೆದ, ನಡೆಯುತ್ತಿರುವ ಮತ್ತು ನಡೆಯುವ ಕ್ರಿಯೆಗಳನ್ನು ಸೂಚಿಸುವುದೇ ಕಾಲಗಳು ಎಂಬುದನ್ನು ಮನದಟ್ಟು ಮಾಡಿಸಿ ಭೂತಕಾಲ, ವರ್ತಮಾನಕಾಲ ಮತ್ತು ಭವಿಷ್ಯತ್ ಕಾಲದ ಬಗ್ಗೆ ಶಿಕ್ಷಕರು ಮಕ್ಕಳಿಗೆ ತಿಳಿಸಿಕೊಡುವುದು.<br><br>* ಶಿಕ್ಷಕರು ಚಿತ್ರಪಟಗಳು, ನೈಜ ಸನ್ನಿವೇಶ, ಔಪಚಾರಿಕ ಮಾತುಕತೆ ಮತ್ತು ಚಟುವಟಿಕೆಗಳ ಮೂಲಕ ಲಿಂಗಗಳನ್ನು ಗುರ್ತಿಸಿ ಬದಲಾಯಿಸಿ ಬರೆಯುವ ಕ್ರಮವನ್ನು ಹೇಳಿಕೊಡುವುದು. | ಪ್ರಶ್ನೋತ್ತರ<br><br>ಚರ್ಚೆ<br><br>ಮಿಂಚು ಪಟ್ಟಿ ಮಾಡುವ ಚಟುವಟಿಕೆ<br><br>ಗುಂಪು ಚಟುವಟಿಕೆ |

## ಅಭ್ಯಾಸ ಹಾಳೆ – 1

ತರಗತಿ : 5 ಪಾಠ : ಸಂಗೊಳ್ಳಿ ರಾಯಣ್ಣ ಮಾಹೆ : ಫೆಬ್ರವರಿ – 2022

☞ ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಸಂಗೊಳ್ಳಿ ರಾಯಣ್ಣ ಯಾವಾಗ ಜನಿಸಿದರು?
2. ರಾಯಣ್ಣನ ಜನ್ಮಸ್ಥಳ ಯಾವುದು?
3. ರಾಯಣ್ಣನ ತಂದೆ ತಾಯಿಯ ಹೆಸರೇನು?
4. 'ಸಾವಿರ ಒಂಟೆ ಸರದಾರ' ಎಂಬ ಬಿರುದನ್ನು ಯಾರು ಹೊಂದಿದ್ದರು?
5. ಸಂಗೊಳ್ಳಿ ರಾಯಣ್ಣನು ಯಾವ ಸಂಸ್ಥಾನದ ಬಿಡುಗಡೆಗಾಗಿ ಹೋರಾಡಿದನು?
6. ಕಿತ್ತೂರಿನ ರಾಣಿ ಚೆನ್ನಮ್ಮನ ದತ್ತುಪುತ್ರನ ಹೆಸರೇನು?
7. ಸಂಗೊಳ್ಳಿ ರಾಯಣ್ಣನನ್ನು ಯಾವಾಗ ಗಲ್ಲಿಗೇರಿಸಲಾಯಿತು?

☞ ಈ ಪದಗಳಿಗೆ ಅರ್ಥ ಬರೆಯಿರಿ:

1. ಕಲಿ
2. ಎರಗು
3. ಕಕ್ಕಾ ಬಿಕ್ಕಿ
4. ನಿಪುಣ

ಅಭ್ಯಾಸ ಹಾಳೆ – 2

ತರಗತಿ : 5 ಪಾಠ : ಸಂಗೊಳ್ಳಿ ರಾಯಣ್ಣ ಮಾಹೆ : ಫೆಬ್ರವರಿ – 2022

☞ ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ:

1. 'ಗೆರಿಲ್ಲಾ ಯುದ್ಧ' ಎಂದರೇನು?

2. ಸಂಗೊಳ್ಳಿ ರಾಯಣ್ಣನ ಅತ್ಯಂತ ದೊಡ್ಡ ಸಾಹಸ ಯಾವುದು?

3. ನ್ಯಾಯಾಲಯದಲ್ಲಿ ರಾಯಣ್ಣ ತನ್ನ ಕಾರ್ಯಗಳ ಬಗ್ಗೆ ಯಾವ ಸಮರ್ಥನೆ ನೀಡಿದನು?

4. ಯಾವುದು ಆದ್ಯ ಕರ್ತವ್ಯವೆಂಬುದನ್ನು ಸಂಗೊಳ್ಳಿ ರಾಯಣ್ಣ ತೋರಿಸಿಕೊಟ್ಟಿದ್ದಾನೆ?

## ಅಭ್ಯಾಸ ಹಾಳೆ – 3

ತರಗತಿ : 5 | ಪಾಠ : ಸಂಗೊಳ್ಳಿ ರಾಯಣ್ಣ | ಮಾಹೆ : ಫೆಬ್ರವರಿ – 2022

☞ ಈ ಪದಗಳಿಗೆ ಸಮನಾರ್ಥಕ ಪದಗಳನ್ನು ಬರೆಯಿರಿ.

1. ಸ್ಮರಣೆ = __________ __________
2. ಸ್ಫೂರ್ತಿ = __________ __________
3. ಕ್ರೋಧ = __________ __________
4. ಯುದ್ಧ = __________ __________
5. ಕಾಡು = __________ __________

☞ ಕೊಟ್ಟಿರುವ ವಾಕ್ಯಗಳ ಸಂದರ್ಭ ಸಹಿತ ವಿವರಿಸಿ.

1. ಆಗಸ್ಟ್ ಹದಿನೈದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಹಬ್ಬದ ದಿನ.

2. ಎಲ್ಲರಲ್ಲೂ ದೇಶಪ್ರೇಮವನ್ನು ಉಕ್ಕಿಸುತ್ತಲೇ ಇದೆ.

## ಅಭ್ಯಾಸ ಹಾಳೆ – 4

ತರಗತಿ : 5 ಪದ್ಯ : ಮೂಡಲ ಮನೆ ಮಾಹೆ : ಫೆಬ್ರವರಿ – 2022

☞ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ಆಲದ ಮರ ಎಲ್ಲಿ ಬೆಳೆದು ನಿಂತಿದೆ?

2. ಬನ್ನಿರಿ, ನೀವು ನಮ್ಮ ಬಳಗ ಎಂದು ಕವಿ ಯಾರಿಗೆ ಹೇಳುತ್ತಿದ್ದಾರೆ?

3. ಮರದಲ್ಲಿ ಯಾರೆಲ್ಲಾ ಸೇರಿ ಕರಗ ಕುಣಿಯುತ್ತಾರೆ?

4. ಕವಿ ಪದ್ಯದಲ್ಲಿ ದೇಶವನ್ನು ಯಾವುದಕ್ಕೆ ಹೋಲಿಸಿದ್ದಾರೆ?

☞ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ:

ನಮ್ಮೂರ ____________________

______________________________

______________________________

___________________ ಹಾಂಗ ಬಿಳಲ ॥

☞ ಈ ವಾಕ್ಯಗಳಲ್ಲಿ ಗೆರೆ ಎಳೆದ ಶಬ್ದ ಯಾವ ಕಾಲವನ್ನು ಸೂಚಿಸುತ್ತದೆ ಬರೆಯಿರಿ:

1. ಮನು ಗೆಳೆಯನ ಮನೆಗೆ <u>ಹೋಗುವನು</u> ( )
2. ರಾಣಿ ಕ್ರಿಕೆಟ್ <u>ಆಡುತ್ತಾಳೆ</u> ( )
3. ಚಂದನ್ ಹಾಡು <u>ಹಾಡಿದನು</u> ( )

☞ ಮಾದರಿಯಂತೆ ಸರಿಯಾದ ಶಬ್ದ ಬರೆಯಿರಿ:

ಮಾದರಿ : ರಾಜ್ಯವನ್ನು ಆಳುವವನು ---- ರಾಜ

1. ಕಾಯಿಲೆಯಿಂದ ಹಾಸಿಗೆಯಲ್ಲಿ ಮಲಗಿದವ ----
2. ಹೂವನ್ನು ಮಾರುವವಳು ----
3. ಸೇನೆಯನ್ನು ಮುನ್ನಡೆಸುವವ ----
4. ಪದ್ಯವನ್ನು ರಚಿಸುವವಳು ------